
ಧಾರಾವಾಹಿ–2

# ಅಜ್ಞಾತ

■ ವಿವೇಕಾನಂದ ಕಾಮತ್
ಕಲೆ: ಎಚ್.ಎಸ್. ಮೋನಪ್ಪ



## ಕಾಡೊಳಗೆ ಕಾಯಕನಾಥ

ತಲೆಯ ಮೇಲೆ ಚಪ್ಪರ ಹಾಸಿದಂತೆ ಆವರಿಸಿಕೊಂಡ ವಿವಿಧ ಪ್ರಭೇದದ ಮರಗಳತ್ತ ಕಣ್ಣು ಹಾಯಿಸಿದರೆ ಅವುಗಳಲ್ಲಿ ಅರಳಿ ನಿಂತ ಹೂವು, ಹಣ್ಣುಗಳು, ಬೇರೆಯೇ ಲೋಕಕ್ಕೆ ಅವನನ್ನು ಎಳೆ ತಂದಂತಿತ್ತು. ಆ ಮರಗಳಿಂದ ಬಂಧಮುಕ್ತವಾಗಿ ಬಿದ್ದ ಹಣ್ಣುಗಳ ಬೀಜದಿಂದ ಮತ್ತೆ ಹುಟ್ಟಿ ಬೆಳೆದ ಗಿಡಗಳು ಜನನ ಮರಣದ ಚಕ್ರವನ್ನು ಪ್ರತಿನಿಧಿಸುವಂತೆ ಕಂಡವು. ಅವನು ಕಾಡಿನ ಆತ್ಮದೊಳಗೆ ಹೊಕ್ಕ ತೊಡಗಿದಂತೇ ಚಿತ್ರವಿಚಿತ್ರ ಶಬ್ದಗಳು ಅಲ್ಲಿನ ನೀರವತೆಯನ್ನು ಭೇದಿಸಿ ಆಲಿಸತೊಡಗಿತ್ತು. ಅಲ್ಲಿ ವಾಸಿಸುತ್ತಿದ್ದ ಕೀಟಗಳು, ಪಕ್ಷಿಗಳು ಯಾರ ಭಯವೂ ಇಲ್ಲದೆ ತಮ್ಮ ಕಾಯಕದ ಹಾಡು ಹಾಡುತ್ತಿದ್ದರೆ ಹೊಸ ಅನುಭೂತಿಯಲ್ಲಿ ಮಿಂದ ಕಾಯಕನಾಥನಿಗೆ ಹೊಸ ಪ್ರಪಂಚಕ್ಕೆ ಕಾಲಿರಿಸಿದ ಹೊಸ ಅನುಭವ ದಕ್ಕಿತ್ತು. ಬರುಬರುತ್ತಾ ಆ ಶಬ್ದಗಳು ಗಾಢವಾಗತೊಡಗಿದಾಗ ಅವನೆದೆಯಲ್ಲಿ ಹೊಸ ಭಯ ಉಂಟು ಮಾಡಿತ್ತು. ಸುತ್ತಲೂ ತಿರುಗಿ ನೋಡಿದವನಿಗೆ ತಾನು ಬಂದ ಹಾದಿಯೇ ಯಾವುದೆಂದು ತಿಳಿಯದಷ್ಟು ಮರಗಳ ದಟ್ಟತೆ, ಮಾನವನ ಹೆಜ್ಜೆ ಮೂಡದೇ ಮರಗಳಿಂದ ಬಿದ್ದ ಎಲೆಗಳು, ಕಾಡು ಹೂ, ಹಣ್ಣುಗಳು ಹರಡಿಕೊಂಡು ನೆಲವನ್ನು ಮುಚ್ಚಿ ಹಾಕಿ ಬಂದ ಹಾದಿಯೇ ತಿಳಿಯದಂತಾಗಿತ್ತು. ಬಹಳಷ್ಟು ದೂರ ಚಲಿಸಿ ಬಂದಿದ್ದರಿಂದ ದೇಹವೂ ಸೋತಿತ್ತು. ಹೊಟ್ಟೆಯಲ್ಲೂ ಏನೂ ಇರಲಿಲ್ಲ. ರೈಲ್ವೆ ನಿಲ್ದಾಣದ ನೀರಿನ ಶಕ್ತಿ ಇಷ್ಟು ದೂರಕ್ಕೆ ತಂದು ಈಗ ಕೈಕೊಟ್ಟಿತ್ತು. ಸಣ್ಣಗೆ ಕತ್ತಲು ಆವರಿಸತೊಡಗಿ ಹಕ್ಕಿಗಳು ಗೂಡು ಸೇರುವ ತವಕದಿಂದ ಅಷ್ಟು ಶಬ್ದ ಮಾಡುತ್ತಿದೆ ಎನಿಸಿತ್ತು. ಯಾವುದೋ ಮರದ ಆಸರೆಯಲ್ಲಿ ಅದರ ಕಾಂಡಕ್ಕೆ ಬೆನ್ನಾನಿಸಿ ಕುಳಿತವನು ತನ್ನ ಸ್ಥಿತಿಯನ್ನು ಧೇನಿಸಿಕೊಂಡವನ ತುಟಿಯಲ್ಲಿ ಒಂದು ವಿಚಿತ್ರ ನಗು ಮೂಡಿತು.

ಬದುಕು, ಸಮಾಜ ಯಾವುದೂ ಬೇಡವೆಂದು ಕಾಡು ಸೇರಿಕೊಂಡ ತಾನು, ಯಾವುದೋ ಮರದಡಿ ತಪಸ್ಸಿಗೆ ಕುಳಿತುಕೊಂಡ ಋಷಿಯಂತೆ ಕುಳಿತಿರುವೆ! ತನಗೆ ಯಾವ ಸಿದ್ಧಿ ಬೇಕಿದೆ? ಯಾವ ಸಾಕ್ಷಾತ್ಕಾರವಾಗಬೇಕಿದೆ? ಇಲ್ಲಿಂದ ಹೊರ ಹೋಗಬೇಕೇ? ಇಲ್ಲೇ ಇದ್ದು ಬಿಡಬೇಕೇ? ಹೊರಗಿನಿಂದ ಬಂದು ಒಳಗಿನ ಹಾದಿ ಹಿಡಿದಿರುವೆ. ಈ ಹಾದಿ ತನ್ನನ್ನು ಅರಿತುಕೊಳ್ಳಲು, ತನ್ನೊಳಗಿನ ಹೊಸ ಪಯಣವನ್ನು ಕಂಡುಕೊಳ್ಳುವ ಹಾದಿ.